
ಆದಿನಾರಾಯಣಮುನಿ, ಕೊಳ್ಳೇಗಾಲ
ನಮ್ಮ ಬದುಕು ಹಸನಾಗಲು ಯಾವ ಮಾರ್ಗದಲ್ಲಿ ನಡೆಯಬೇಕು?




ವಿವೇಕಾನಂದ ರೋಡ್.

ಕೆ.ಎಂ. ವಿಭೂತಿ, ಹರಿಹರ
ಕೈ ಕೆಸರಾಗದೆ ಬಾಯಿ ಮೊಸರಾಗುವ ಕಾಯಕವಿದೆಯೆ ಗುರುಗಳೆ?
ಲಸ್ಸಿ ಬಾರ್‌ನಲ್ಲಿ ಟೇಸ್ಟರ್ ಕೆಲಸ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಓರಗೆಯುವಳ ಪ್ರೀತಿಗೆ ಓಗೊಟ್ಟು ಓಡಿಹೋದ ನನಗೆ ಓಮರನ ಓಲೆ ಬಂದಿದೆ. ಓದಲೆ, ಓಡಲೆ?
ಓಪೆಯ ಓಲೈಕೆಗೆ ಓಗೊಡದೆ ಓಸರಿಸಿದ ಓತಿಕೇತನೇ, ಓಕರ ನೀನೆನಗೆ ಎಂದುತ್ತರಿಸಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ನೀರು; ಇದರ ನಿಜವಾದ ಅರ್ಥ?
'ನೀ ಇರು' ಎನ್ನುತ್ತಾ ರಕ್ಷಿಸುವ ದ್ರವ.

ಕಾವ್ಯಶ್ರೀ, ಶೋರಾಪುರ
ಜ್ಞಾನಭಂಡಾರ ಎಲ್ಲಿ ಅಡಗಿದೆ?



ನಿಮ್ಮ ತಾತ ಅಜ್ಜಿಯೇನು? ಒಳಕೋಣೆಯಲ್ಲಿರಬಹುದು ನೋಡಿ.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ
ಮುಂದೆ ಸೇಬು ಕೊಟ್ಟು ಹಿಂದೆ ರಕ್ತ ಹೀರುವ ಜನಕ್ಕೆ ಏನೆನ್ನಬೇಕು?
ಅನ್ನುವ ಬದಲು ಅವರು ಹಿಂದೆ ಬರಲಾಗದಂತೆ ಗೋಡೆಗೊರಗಿ ಕೂಡಿ.

ಮಹಾವೀರ ಕಾಸರ, ಶಿವಮೊಗ್ಗ
ಭ್ರಷ್ಟ, ಭಂಡ ರಾಜಕಾರಣಿಗಳೇ ಸರ್ಕಾರ ನಿರ್ವಹಿಸುತ್ತಿರುವಾಗ ಅಧಿಕಾರಿಗಳೇಕೆ ಬೇಕು?
ಅಧಿಕಾರಿಗಳೇ ಅವರಿಗೆ ಕಲೆಕ್ಷನ್ ಸೆಂಟರ್‌ಗಳು.

ಫಾಲನೇತ್ರ ಸಜ್ಜನ, ಶಿರಸಿ
ತಾಂಬೂಲದ ಸವಿಯುಂಡ ದೇವತೆಗಳು ಗುಟ್ಕಾದಿಂದ ವಂಚಿತರೇ?
ಊಹೂಂ. ಗುಟ್ಕಾಧಣಿಗಳು ಇಡುವ ನೈವೇದ್ಯದಲ್ಲಿ ಅದರ ಘಾಟು ಇರುತ್ತದಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಮಳೆ ನಿಂತರೂ ಹನಿ ನಿಲ್ಲೋದಿಲ್ಲ; ಈ ವಾಕ್ಯವನ್ನು ರಾಜಕೀಯಕ್ಕೆ ಹೋಲಿಸಿದರೆ?
ಅಧಿಕಾರವನ್ನು ಬಿಟ್ಟರೂ ಅನ್ಯಾಯವನ್ನು ಬಿಡುವುದಿಲ್ಲ.

ಆಶಾ ಅಪ್ರಮೇಯ, ದಾವಣಗೆರೆ
ತೀರ್ಥಕ್ಷೇತ್ರಗಳಿಗೆ ಭೇಟಿಯಿತ್ತು ದರ್ಶನ ಪಡೆವುದಕ್ಕೂ, ಆನ್ಲೈನ್ ದರ್ಶನ ಪಡೆಯುವುದಕ್ಕೂ ವ್ಯತ್ಯಾಸ?
ಅದು ಸುಂದರ ಮಗುವನ್ನು ಮುದ್ದಿಸಿದಂತೆ; ಇದು ಮಗುವಿನ ಚಿತ್ರಕ್ಕೆ ಮುತ್ತಿಟ್ಟಂತೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಎಲ್ಲ ಧರ್ಮಗಳಲ್ಲಿ ಸ್ತ್ರೀಪುರುಷರು ಒಟ್ಟಿಗೆ ಪ್ರಾರ್ಥಿಸುತ್ತಾರೆ. ಮುಸ್ಲಿಮರಲ್ಲೇಕೆ ಪುರುಷರಷ್ಟೇ ಪ್ರಾರ್ಥಿಸುವುದು?
ಆ ಧರ್ಮ ಶುರುವಾದ ಬಿರುಬಿಸಿಲುನಾಡಿನಲ್ಲಿ ಸ್ತ್ರೀ ಹೊರಬಂದು ಬಳಲದಿರಲೆಂಬ ಕಾಳಜಿ ಇದ್ದೀತು.

ಶಿವಶಂಕರ್, ಬೆಂಗಳೂರು
ಸಿಟಿ ಬಸ್ಸುಗಳ ನಿಲ್ದಾಣಗಳು ಸಿಗ್ನಲ್ ಆದಕೂಡಲೆ ಇರುತ್ತವೆ. ಏಕೆ?
ಜನರು ಸಿಗ್ನಲ್‌ನಲ್ಲಿ ಬಸ್ ನಂಬರ್ ಓದಿಕೊಂಡು, ಓಡಿಕೊಂಡು ನಿಲ್ದಾಣ ತಲುಪಲು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಕನ್ನಡ ಶಾಲೆಗಳಲ್ಲಿ ಕನ್ನಡದ ಅಂಕಿಗಳನ್ನು ಕಲಿಸುತ್ತಿಲ್ಲ. ಯಾಕೆ?
ಕನ್ನಡಿಗರು ಉದಾರಿಗಳು. ಔದಾರ್ಯ ಇರುವಲ್ಲಿ ಲೆಕ್ಕಾಚಾರ ಇರುವುದಿಲ್ಲವೆಂದು.

ಮಂಡಿ ಕುಮಾರ್, ಬೆಂಗಳೂರು
ಮಿಸೆಸ್ ಯಾವ ಸಂದರ್ಭದಲ್ಲಿ ಮಿಸ್ ಹೊಡೆಯುತ್ತಾರೆ?
ನೀವು ಕೊಟ್ಟ ಪ್ರಾಮಿಸ್ ಮಿಸ್ ಆದಾಗ.

## ಬಹುಮಾನಿತ ಪ್ರಶ್ನೆ

ಸಿಹಿಮೊಗೆ ರಮೇಶ್, ಮೈಸೂರು
ಬ್ರಿಟಿಷರು ಕಟ್ಟಿದ ಕಟ್ಟಡಗಳು ಇನ್ನೂ ಭದ್ರವಾಗಿವೆ; ನಮ್ಮ ಸರ್ಕಾರಗಳು ಕಟ್ಟಿದವು ಕುಸಿಯುತ್ತಿವೆಯಲ್ಲ?
ಕಟ್ಟಡಗಳ ಬಾಬ್ತಿನಲ್ಲೂ 'ಪುನರಪಿ ಜನನಂ...' ಅನ್ನು ಅನ್ವಯಿಸುವುದು ಇವರ ಧ್ಯೇಯವಂತೆ.

ಪಿ.ಜೆ. ರಾಘವೇಂದ್ರ, ಮೈಸೂರು
ಕುಡಿದು ವಾಹನ ಚಲಾಯಿಸುವುದು ಅಪರಾಧ. ಕುಡುಕರ ಹಣದಲ್ಲಿ ಸರಕಾರ ನಡೆಸುವುದು?
ಸರ್ಕಾರದ ಎಂ–ಜಿನ್ ಒಳ್ಳೆಯ ಘಾ–ರಂನಲ್ಲಿದ್ದು ಪರಿಣಾಮ ಬೀರು–ವುದಂತೆ.

ಅನಸೂಯ ಟಿ., ಕೇದಿಗೆಮನೆ
ಭಗವಂತನ ನಾಮವನ್ನು ಏಕೆ ಮೋಸಕ್ಕೆ ಹೋಲಿಕೆ ಮಾಡಿದ್ದಾರೆ?
ವಂಚಕನಲ್ಲೂ ಅದೃಶ್ಯವಾಗುವ ಗುಣ ಇರುವುದರಿಂದ.

ವಿ. ಹೇಮಂತಕುಮಾರ್, ಬೆಂಗಳೂರು
ಉದುರಿದ ಎಲೆಯು ಮರಕ್ಕೆ ಭಾರ ಆಗಿತ್ತಾ?



ಇಲ್ಲ. ಎಲೆಗೇ ನಿಂತಲ್ಲೇ ನಿಂತ ಮರದ ಸಹವಾಸ ಬೇಸರ ತಂದಿತ್ತು.

ಭಾರತೀ ಗಂಗಾಧರ್, ಬೆಂಗಳೂರು
ರಾಜಕಾರಣಿಗಳು ವಿದೇಶದಲ್ಲಿ ನಮ್ಮ ದೇಶದ ಮಾನ ಹರಾಜು ಹಾಕುವುದು ಎಷ್ಟರಮಟ್ಟಿಗೆ ಸರಿ?
ಅವರವರ ಪಕ್ಷಗಳ, ಚೇಲಾಗಳ ಮಟ್ಟಿಗೆ.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಕಾಲನ ಓಟ, ಕಾಲಿನ ಓಟ; ಇವೆರಡರಲ್ಲಿ ಯಾವುದು ಅತಿ ವೇಗ?
ನಲ್ಲೆ ಜೊತೆ ಇದ್ದಾಗ ಕಾಲನದು; ಆಗೇನಾದರೂ ಅವಳಣ್ಣ ಕಂಡರೆ ಕಾಲಿನದು.

■ ರಾಮ್